# ಸಸ್ಯಶಾಸ್ತ್ರ ವಿಭಾಗದಲ್ಲಿ ವನಮಹೋತ್ಸವ ಮತ್ತು ಮರಗಳಿಗೆ ನಾಮಫಲಕವನ್ನು ಹಾಕುವ ಕಾರ್ಯಕ್ರಮವನ್ನು ದಿನಾಂಕ: 12.06.2023 ರಂದು ನೆರವೇರಿಸಲಾಯಿತು.

ದಿನಾಂಕ 12–06–2023 ರಂದು ಸಸ್ಯಶಾಸ್ತ್ರ ವಿಭಾಗದಿಂದ “ವನಮಹೋತ್ಸವ”ದ ಅಂಗವಾಗಿ ಮರಗಳಿಗೆ ನಾಮಫಲಕಗಳನ್ನು ಅಳವಡಿಸುವ ಕಾರ್ಯಕ್ರಮವನ್ನು NSS A ಮತ್ತು B ಘಟಕದೊಂದಿಗೆ ಆಚರಿಸಲಾಯಿತು.

ಈ ಕಾರ್ಯಕ್ರಮಕ್ಕೆ B.Sc. M.Sc. ಮತ್ತು NSS ವಿದ್ಯಾರ್ಥಿಗಳು ಭಾಗವಹಿಸಿದರು. ವಿಶ್ರಾಂತ ಪ್ರಾಚಾರ್ಯರಾದ ಡಾ. ಎಸ್.ಸಿ. ಚೌಗಲಾ ಅವರು ಮನೊರಂಜನ ಸಸ್ಯವನ್ನು ನೆಟ್ಟು, ಗಂಧದ ಮರಕ್ಕೆ ನಾಮಫಲಕವನ್ನು ಹಾಕಿದರು. ಮತ್ತು ಪ್ರಾಚಾರ್ಯರಾದ ಡಾ. ಜೆ.ಎಲ್. ಕಲ್ಯಾಣ ಅವರು ಕೆಮ್ಮರವನ್ನು ನೆಟ್ಟು, ಬೇವಿನ ಮರಕ್ಕೆ ನಾಮಫಲಕವನ್ನು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು. B.Sc. M.Sc. ಮತ್ತು NSS ವಿದ್ಯಾರ್ಥಿಗಳು ವಿವಿಧ ಜಾತಿಯ ಗಿಡಗಳನ್ನು ಸಸ್ಯಶಾಸ್ತ್ರ ವಿಭಾಗದಲ್ಲಿ (ರಕ್ತಚಂದನ) ಉಪಹಾರಗೃಹದ ಹಿಂದುಗಡೆ (ಗುಗ್ಗುಲ ಮರವನ್ನು ಮತ್ತು ಹಲಸಿನ ಜಾತಿಯ ಮರವನ್ನು) ಮತ್ತು ಉಪಹಾರಗೃಹದ ಮುಂದುಗಡೆ ಬೇವಿನ ಮರ, ನಾಗಲಿಂಗ ಪುಷ್ಪ ಮರವನ್ನು ನೆಟ್ಟರು.

ಡಾ. ಕೆ. ಕೊಟ್ರೇಶ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ ಇವರು ವನಮಹೋತ್ಸವದ ಮಹತ್ವವನ್ನು ತಿಳಿಸುತ್ತಾ ನಾಮಫಲಕದಲ್ಲಿ QR ಕೋಡ ಅಳವಡಿಸಿರುವ ಬಗ್ಗೆ ಮಾಹಿತಿಯನ್ನು ಸಹ ಕೊಟ್ಟರು. ಈ QR ಕೋಡನ್ನು ಗೂಗಲ್ ಲೆನ್ಸ ಮುಖಾಂತರ ಮರಗಳ ಸವಿಸ್ತಾರ ಮಾಹಿತಿಯನ್ನು ಚಿತ್ರದೊಂದಿಗೆ ಪಡೆಯಬಹುದಾಗಿದೆ.